# ಐಯ್ಯಾಮ್ ವೆರಿ ಸಾರಿ!




**ರಾಜಶೇಖರ ಕುಕ್ಕುಂದಾ**
ಕಲೆ: ಸಂತೋಷ್ ಸಸಿಹಿತ್ಲು

ಚಂದಾಮಾಮಾ ಬಾ ಬಾ ಅಂದೆ
ಭೂಮಿಗಿಳಿದು ಬಂದ
ಬೆನ್ನಿಗೊಂದು ಬ್ಯಾಗ್ ಹಾಕಿ
ಸ್ಕೂಲಿಗೂನು ಬಂದ

ಮೊಲದ ಹಂಗ ಜಿಗಿದು ಜಿಗಿದು
ಕ್ಲಾಸಿನಲ್ಲಿ ಹೊಕ್ಕ
ಬೆಣ್ಣೆ ಹಂಗ ಮಿಸ್ಸ್ ಕೈಗೆ
ಭಾಳ ಛಲೋ ಸಿಕ್ಕ

‘ಅಆಇಈಉಊ’ ಎಲ್ಲ
ಮೊದ್ಲೆ ಬರ್ದುಬಿಟ್ಟ
‘ಹೊಹ್ಹೋ ಹೊಹ್ಹೋ ಹೊಹ್ಹೋ’ ಅಂತ
ಭಾರಿ ಮೆರ್ದುಬಿಟ್ಟ

ಮಿಸ್ಸ್ ಬಂದು ಹೇಳಿಬಿಟ್ರು:
‘ಬರಿಯೊ ನೂರು ಸಾರಿ’
ಇವನು ಹೇಳಿ ಹೊರಟುಬಿಟ್ಟ:
‘ಐಯ್ಯಾಮ್ ವೆರಿ ಸಾರಿ!’

## ಕುಂಚ ಪ್ರಪಂಚ

‘ಸುಧಾ’ ಇದು ಮಕ್ಕಳ ಭಾವ ವಿಕಾಸಕ್ಕೆ ವೇದಿಕೆ. ಅವರೇ ಬಿಡಿಸಿದ ವರ್ಣಚಿತ್ರ–ರೇಖಾಚಿತ್ರಗಳನ್ನು ಅವರ ವೈಯಕ್ತಿಕ ವಿವರ ಮತ್ತು ಭಾವಚಿತ್ರವನ್ನು ಲಗತ್ತಿಸಿ ‘ಕುಂಚ ಪ್ರಪಂಚ’ ವಿಭಾಗಕ್ಕೆ ಕಳಿಸಿಕೊಡಿ.
**ವಿಳಾಸ:** editorsu@sudha.co.in



**ಪೂರ್ಣಿಮಾ ಸಿ.ಗಣಪ್ಪನವರ**
8ನೇ ತರಗತಿ, ವಿ.ಜಿ. ಲಿಂಬಿಕಾಯಿ
ಪ್ರೌಢಶಾಲೆ, ಮುಂಡರಗಿ



**ವಿಭು ಶರ್ಮ**
4ನೇ ತರಗತಿ, ವಿದ್ಯಾದಾಯಿನಿ
ಆಂಗ್ಲ ಮಾಧ್ಯಮ ಶಾಲೆ
ಸುರತ್ಕಲ್, ಮಂಗಳೂರು



